KACD510020132024

Presented on : 27-07-2024
Registered on : 27-07-2024
Decided on : 01-04-2026
Duration : 1 year, 8 months, 5 day

# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

**ದಿನಾಂಕಃ 1 ನೇ ಏಪ್ರಿಲ್ ಮಾಹೆ, 2026 ನೇ ಇಸವಿ**

**: ಉಪಸ್ಥಿತರು :**

**ಶ್ರೀ ಪ್ರಸನ್ನ ಕುಮಾರ್ ಸಿ.,** ಬಿ.ಎ.ಎಲ್. ಎಲ್ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**ಸಿ.ಸಿ. ಸಂಖ್ಯೆಃ 886/2024**

ರಾಜ್ಯದ ಪರವಾಗಿ
ಹೊಸದುರ್ಗ ಪೋಲೀಸರು,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

.....ಫಿರ್ಯಾದುದಾರರು

**(ಫಿರ್ಯಾದುದಾರರ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸಿರುತ್ತಾರೆ)**

ವಿರುದ್ಧ

1. ಸರೋಜಮ್ಮ ಗಂಡ ಕಂಚಪ್ಪ,
ಸುಮಾರು 55 ವರ್ಷ,
ವೃತ್ತಿ:ಮನೆಗೆಲಸ
ವಾಸ: ಜೋಗಮ್ಮನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು

PRASANNAKUMAR C

Digitally signed by PRASANNAKUMAR C
Date: 2026.04.02 16:23:42 +0530

2. ಸುವರ್ಣಮ್ಮ ಗಂಡ ವೀರಭದ್ರಪ್ಪ,
ಸುಮಾರು 46 ವರ್ಷ,

ವೃತ್ತಿ:ವ್ಯವಸಾಯ
ವಾಸ: ಜೋಗಮ್ಮನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು

3. ಮಧು ತಂದೆ ಹನುಮಂತಪ್ಪ,
ಸುಮಾರು 28 ವರ್ಷ,
ವೃತ್ತಿ:ವ್ಯವಸಾಯ
ವಾಸ: ಮಾಡದಕೆರೆ ಗ್ರಾಮ,
ಹೊಸದುರ್ಗ ತಾಲ್ಲೂಕು

4. ಹನುಮಂತಪ್ಪ ತಂದೆ ಹನುಮಂತಪ್ಪ,
ಸುಮಾರು 38 ವರ್ಷ,
ವೃತ್ತಿ:ವ್ಯವಸಾಯ
ವಾಸ: ಮಾಡದಕೆರೆ ಗ್ರಾಮ,
ಹೊಸದುರ್ಗ ತಾಲ್ಲೂಕು

5. ರಂಗಮ್ಮ ಗಂಡ ತಿಮ್ಮಪ್ಪ,
ಸುಮಾರು 44 ವರ್ಷ,
ವೃತ್ತಿ: ಮನೆಗೆಲಸ
ವಾಸ: ಜೋಗಮ್ಮನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು

... ಆರೋಪಿತರು

**(ಆರೋಪಿತರ ಪರವಾಗಿ ಶ್ರೀ ಹೆಚ್.ಜಿ.ಗಂಗಾಧರ ವಕೀಲರು ಪ್ರತಿನಿಧಿಸಿರುತ್ತಾರೆ.)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | 21.06.2024 |
| ಯಾವ ಕಲಂ.ಗಳಡಿಯಲ್ಲಿ ಆರೋಪಣೆ ಮಾಡಲಾಗಿದೆ | : | ಭಾರತೀಯ ದಂಡ ಸಂಹಿತೆ ಕಲಂ. 447, 504, 323, 354 ಮತ್ತು 506 ಸಹವಾಚಕ ಕಲಂ.149 |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 30.01.2026 |

| | | |
|---|---|---|
| ತೀರ್ಪು ಘೋಷಣೆಯಾದ ದಿನಾಂಕ | : | 01.04.2026 |
| ಆರೋಪಿತರ ಹೇಳಿಕೆ | : | ತಪ್ಪು ಮಾಡಿಲ್ಲ |
| ನ್ಯಾಯಾಲಯದ ಅಭಿಪ್ರಾಯ | : | ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ |

Sd/-
(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**** ತೀರ್ಪು****

ಹೊಸದುರ್ಗ ಆರಕ್ಷಕ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಮೇಲ್ಕಂಡ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 447, 504, 323, 354 ಮತ್ತು 506 ಸಹವಾಚಕ ಕಲಂ.149 ರಡಿ ದಂಡಿಸಲ್ಪಡುವ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ಅವರ ವಿರುದ್ಧ ಅಂತಿಮ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತಾರೆ.

**ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

2. ದಿನಾಂಕಃ 21.06.2024 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಹೊಸದುರ್ಗ ಪೋಲೀಸ್ ಠಾಣಾ ಸರಹದ್ದಿನ ಹೊಸದುರ್ಗ ತಾಲ್ಲೂಕು ಜೋಗಮ್ಮನಹಳ್ಳಿ ಗ್ರಾಮದಲ್ಲಿರುವ ಚಾಸಾ-1 ಲಲಿತಮ್ಮ ರವರು ಅನುಭವದಲ್ಲಿರುವ ರಿ.ಸ.ನಂ.13 ರ ಜಮೀನಿಗೆ ಆರೋಪಿತರು ಅಕ್ರಮ ಪ್ರವೇಶ ಮಾಡಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ. ಚಾಸಾ-1 ರವರನ್ನು ಹಿಡಿದು ಎಳೆದಾಡಿ ಕೈಕಾಲುಗಳಿಂದ ಚಾಸಾ-1 ರವರ ಬಲಗಾಲಿಗೆ ಮತ್ತು ಮೈಕೈಗೆ

ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ ಪ್ರಾಣ ಬೆದರಿಕೆ ಹಾಕಿರುವುದು ಈ ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಸ್ತುತ ಪ್ರಕರಣದಲ್ಲಿ ದಿನಾಂಕಃ 21.06.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚಾಸಾ-7 ಧೃವಕುಮಾರ್ ಬಿ.ಜಿ ರವರು ಠಾಣೆಯಲ್ಲಿರುವಾಗ ಚಾಸಾ-1 ಫಿರ್ಯಾದುದಾರರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕ್ಕದ್ದಮೆ ಸಂಃ 276/2024 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ. ನಂತರ ದಿನಾಂಕ 22.06.2024 ರಂದು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟು, ಕೃತ್ಯ ಸ್ಥಳ ಮಹಜರ್ ನ್ನು ಜರುಗಿಸಿ ನ್ಯಾಯಾಲಯದ ಅನುಮತಿ ಕೋರಿರುತ್ತಾರೆ. ನಂತರ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ತನಿಖೆ ಮುಕ್ತಾಯಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತರ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ದೋಷಾರೋಪಣಾ ಪತ್ರದ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ. 447, 504, 323, 354 ಮತ್ತು 506 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.190(1)(ಬಿ)ರಡಿಯಲ್ಲಿ ಸಂಜ್ಞೆ ತೆಗೆದುಕೊಂಡು ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು. ನಂತರ ಆರೋಪಿತರಿಗೆ ನ್ಯಾಯಾಲಯದಿಂದ ಸಮನ್ಸ್ ಹೊರಡಿಸಲಾಯಿತು.

5. ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಿದ ನಂತರ ದೋಷಾರೋಪಣಾ ಪೂರ್ವ ವಾದವನ್ನು

ಆಲಿಸಲಾಯಿತು. ನಂತರ ಅಪರಾಧದ ಆರೋಪವನ್ನು ಓದಿ ಹೇಳಲಾಗಿ ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು ಹೇಳಿ, ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದು, ವಿಚಾರಣೆ ಆಗಬೇಕೆಂದು ನಿವೇದಿಸಿಕೊಂಡಿರುತ್ತಾರೆ.

6. ಅದರಂತೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸುತ್ತದೆ.

1. ದಿನಾಂಕಃ 21.06.2024 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಹೊಸದುರ್ಗ ಪೋಲೀಸ್ ಠಾಣಾ ಸರಹದ್ದಿನ ಹೊಸದುರ್ಗ ತಾಲ್ಲೂಕು ಜೋಗಮ್ಮನಹಳ್ಳಿ ಗ್ರಾಮದಲ್ಲಿರುವ ಚಾಸಾ-1 ಲಲಿತಮ್ಮ ರವರು ಅನುಭವದಲ್ಲಿರುವ ರಿ.ಸ.ನಂ.13 ರ ಜಮೀನಿಗೆ ಆರೋಪಿರು ಏಕೋದ್ದೇಶದಿಂದ ಏಕಾಏಕಿ ಅಕ್ರಮ ಪ್ರವೇಶ ಮಾಡಿದ್ದು , ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 447 ಸಹವಾಚಕ ಕಲಂ.149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿತರು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

2. ಎರಡನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಕೃತ್ಯ ಎಸಗುವ ಉದ್ದೇಶದಿಂದ ಮುಂದುವರೆದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕವಾಗಿ ಶಾಂತಿ ಭಂಗವನ್ನುಂಟು ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 504 ಸಹವಾಚಕ ಕಲಂ.149

ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿತರು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

3. ಮೂರನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಕೃತ್ಯ ಎಸಗುವ ಉದ್ದೇಶದಿಂದ ಮುಂದುವರೆದು ಚಾಸಾ-1 ರವರ ಬಲಗಾಲಿಗೆ ಮತ್ತು ಮೈಕೈಗೆ ಆರೋಪಿತರು ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 323 ಸಹವಾಚಕ ಕಲಂ.149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿತರು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

4. ನಾಲ್ಕನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಹಿಡಿದು ಎಳೆದಾಡಿ ಸ್ತ್ರೀ ಕುಲಕ್ಕೆ ಅವಮಾನವಾಗುವ ರೀತಿಯಲ್ಲಿ ಹಲ್ಲೆ ನಡೆಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 354 ಸಹವಾಚಕ ಕಲಂ.149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿತರು

ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

5. ಐದನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಕೃತ್ಯ ಎಸಗುವ ಉದ್ದೇಶದಿಂದ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿದ್ದು, ಅದರನ್ವಯ ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿತರು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

6. ಯಾವ ಆದೇಶ?

7. ಅಭಿಯೋಜನೆಯವರು ಆರೋಪಿತರ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಮಾಡುವ ಸಲುವಾಗಿ ದೋಷಾರೋಪಣೆ ಪಟ್ಟಿಯಲ್ಲಿರುವ ಬಾಧಿತ ಸಾಕ್ಷಿಯಾದ ಚಾಸಾ-1 ರವರನ್ನು ಅಸಾ-1 ಎಂದು ಅಭಿಯೋಜನೆಯ ಪರವಾಗಿ ಸಾಕ್ಷಿದಾರರನ್ನಾಗಿ ವಿಚಾರಣೆಗೆ ಒಳಪಡಿಸಿರುತ್ತಾರೆ. ಅದಕ್ಕೆ ಪೂರಕವಾಗಿ ನಿಪಿ-1 ರಿಂದ ನಿಪಿ-5 ರಂತೆ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿದೆ. ಈ ಪ್ರಕರಣದ ಮುಖ್ಯ ಸಾಕ್ಷಿದಾರರಾದ ಬಾಧಿತ ಸಾಕ್ಷಿದಾರರು ಅಭಿಯೋಜನೆಯ ಪರವಾಗಿ ನಿಶಾನೆಗೆ ಗುರುತಿಸಿಕೊಂಡ ನಿಪಿ-1 ರಿಂದ 5 ರ ದಾಖಲೆಗಳಿಗೆ ಮತ್ತು ಅಭಿಯೋಜನೆಯವರ ಪ್ರಕರಣಕ್ಕೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿದ್ದು, ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸುವ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

ಆದಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಂಗತಿಗಳು ಸದರಿ ಸಾಕ್ಷಿದಾರರ ಕಡೆಯಿಂದ ಹೊರಹೊಮ್ಮಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿಗಳಿಗೆ ಸಮನ್ಸ್ ಜಾರಿ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ. ಈಗಾಗಲೇ ಈ ಪ್ರಕರಣದಲ್ಲಿನ ಪ್ರಮುಖ ಸಾಕ್ಷಿದಾರರಾದ ಅಸಾ-1 ರವರು ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸದೇ ಇರುವುದರಿಂದ ಅಭಿಯೋಜಕರ ಕೋರಿಕೆಯಂತೆ ಉಳಿದ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದರೆ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ನ್ಯಾಯಾಲಯವು ಮನಗಂಡು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಿ, ಅಭಿಯೋಜನೆಯ ಪರವಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

8. ಅಭಿಯೋಜನೆಯ ಪರವಾಗಿ ನ್ಯಾಯಾಲಯದ ಮುಂದೆ ವಿಚಾರಣೆಗೊಳಪಟ್ಟ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದರಿಂದ ಹಾಗೂ ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯವು ಸದರಿ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಹೊರಹೊಮ್ಮದ ಕಾರಣ ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ವಿಚಾರಣೆಯಿಂದ ವಿನಾಯಿತಿಗೊಳಿಸಲಾಯಿತು.

9. ವಾದಗಳನ್ನು ಆಲಿಸಲಾಯಿತು. ಈ ಪ್ರಕರಣದ ಕಡತ ಹಾಗೂ ಸಾಕ್ಷಿಗಳ ಸಾಕ್ಷ್ಯವನ್ನು ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ.

10. ಅಭಿಯೋಜನೆಯ ಪರ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯಗಳನ್ನು ಆಧರಿಸಿ, ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಃ 1 ರಿಂದ 5 - ನಕಾರಾತ್ಮಕವಾಗಿ
ಅಂಶಃ 6 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗೋಸ್ಕರ

## :: ಕಾರಣಗಳು ::

11. **ಅಂಶಃ 1 ರಿಂದ 5 –** ಈ ಐದು ಅಂಶಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಈ ಐದೂ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರ ವಿರುದ್ದ ರಚಿಸಲಾದ ದೋಷಾರೋಪಣೆಯನ್ನು ರುಜುವಾತುಪಡಿಸುವ ಸಂಬಂಧವಾಗಿ ಅಭಿಯೋಜನೆಯು ತನ್ನ ಪರವಾಗಿ ದೋಷಾರೋಪಣಾ ಪಟ್ಟಿಯಲ್ಲಿರುವ ಸಾಕ್ಷಿದಾರರಾದ ಚಾಸಾ-1 ರಿಂದ 9 ರವರ ಪೈಕಿ ಬಾಧಿತ ಸಾಕ್ಷಿದಾರರಾದ ಚಾಸಾ-1 ರವರನ್ನು ಅಸಾ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿ ಸಾಕ್ಷಿದಾರರ ಮೂಲಕ ನಿಪಿ-1 ದೂರು ಹಾಗೂ ಅಸಾ-1 ರವರ ಸಹಿಯನ್ನು ನಿಪಿ-1(ಎ), ನಿಪಿ-2 ಮಹಜರ್ ಹಾಗೂ ಅಸಾ-1 ರವರ ಸಹಿಯನ್ನು ನಿಪಿ-2(ಎ), ನಿಪಿ-3 ಕಚ್ಚಾ ನಕಾಶೆ ಹಾಗೂ ಅಸಾ-1 ರವರ ಸಹಿಯನ್ನು ನಿಪಿ-3(ಎ), ಫೋಟೋ ನಿಪಿ-4, ಅಸಾ-1 ರವರ ಮರು ಹೇಳಿಕೆಯನ್ನು ನಿಪಿ-5 ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

13. ವಿಚಾರಣೆಗೊಳಪಟ್ಟ ಬಾಧಿತ ಸಾಕ್ಷಿಯಾದ ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಮತ್ತು ತನ್ನ ನಡುವೆ ಯಾವುದೇ

ಗಲಾಟೆಯಾಗಿರುವುದಿಲ್ಲವೆಂದು ಹಾಗೂ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದು ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ, ತನ್ನ ಮೇಲೆ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲವೆಂದು, ತನ್ನ ಮಾನಕ್ಕೆ ಕುಂದುಂಟು ಮಾಡಿಲ್ಲವೆಂದು, ಪ್ರಾಣ ಬೆದರಿಕೆ ಹಾಕಿಲ್ಲ ಹಾಗೂ ಹಲ್ಲೆಗೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ದೂರು ನೀಡಿಲ್ಲವೆಂದು ಘಟನೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇನ್ನು ಅಸಾ-1 ರವರು ಫಿರ್ಯಾದುದಾರರು ಮತ್ತು ಬಾಧಿತ ಸಾಕ್ಷಿದಾರರಾಗಿದ್ದು, ಸದರಿಯವರು ಕ್ರಮವಾಗಿ ನಿಪಿ-1 , 2 ಮತ್ತು 5 ರ ದೂರು, ಪಂಚನಾಮೆ ಮತ್ತು ಹೇಳಿಕೆಯಲ್ಲಿರುವ ವಿಚಾರ ಗೊತ್ತಿರುವುದಿಲ್ಲವೆಂದು ನಿಪಿ-1 , 2 ಮತ್ತು 5 ರ ದಾಖಲೆಗಳಿಗೆ ತದ್ವಿರುದ್ಧವಾದ ಉತ್ತರವನ್ನು ನೀಡಿರುತ್ತಾರೆ.

14. ಹೀಗಿರುವಾಗ ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯವನ್ನು ಗಮನಿಸಿದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿಕೊಂಡು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ಪೂರಕವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದರೂ ಸಹ ಸದರಿ ಸಾಕ್ಷಿದಾರರು ಅಭಿಯೋಜನೆಯವರ ಸೂಚನೆಗಳನ್ನು ಸ್ಪಷ್ಟವಾಗಿ ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ. ಅಸಾ-1 ರವರನ್ನು ಪಾಟೀ-ಸವಾಲಿಗೆ ಒಳಪಡಿಸಿದಾಗ ಆರೋಪಿತರು ತಮ್ಮ ವಿರುದ್ಧ ಸಿ.ಸಿ. ನಂ-1084/2023 ರಂತೆ ಪ್ರಕರಣ ದಾಖಲಿಸಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಎರಡೂ ಪ್ರಕರಣಗಳಲ್ಲಿ ಪರಸ್ಪರ ರಾಜಿ ಮಾಡಿಕೊಂಡಿರುವುದನ್ನು ತಮ್ಮ ಪಾಟೀ ಸವಾಲಿನ ಸಮಯದಲ್ಲಿ ಒಪ್ಪಿಕೊಂಡಿರುತ್ತಾರೆ. ಹೀಗಿರುವಾಗ ಆರೋಪಿತರ ಪರ ವಕೀಲರ ಕಡೆಯಿಂದ

ಯಾವುದೇ ಪಾಟೀ ಸವಾಲು ಇರುವುದಿಲ್ಲ. ಇದರಿಂದ ಮೇಲ್ಕಂಡ ಆರೋಪಗಳನ್ನು ರುಜುವಾತುಪಡಿಸಲು ಅಸಾ-1 ರವರು ಪ್ರಮುಖ ಸಾಕ್ಷಿಗಳಾಗಿರುತ್ತಾರೆ. ಆದರೆ ಸದರಿ ಸಾಕ್ಷಿದಾರರು ಆರೋಪಿತರು ಅಪರಾಧಿಗಳು ಎಂದು ನಿರ್ಣಯಿಸುವಲ್ಲಿ ಅಭಿಯೋಜನೆಗೆ ಸಹಕಾರಿಯಾಗುವಂತಹ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಸಾಕ್ಷಿದಾರರ ಸಾಕ್ಷ್ಯವು ಇಲ್ಲಿ ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸಿರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

15. ಆದರೆ, ಭಾರತೀಯ ದಂಡ ಸಂಹಿತೆ ಕಲಂ 354 ರಾಜಿಯಾಗತಕ್ಕ ಆರೋಪವಲ್ಲದ ಕಾರಣ, ಪಕ್ಷಗಾರರು ರಾಜಿಯಾಗಿದ್ದಾರೆ ಎಂಬ ಕಾರಣಕ್ಕೆ ಆರೋಪಿತರನ್ನು ಆರೋಪ ಮುಕ್ತಗೊಳಿಸಲು ಸಾಧ್ಯವಿರುವುದಿಲ್ಲ. ಆದರೆ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರೇ ಅಭಿಯೋಜನೆಗೆ ಬೆಂಬಲಿಸದೇ ಇರುವ ಕಾರಣ ಅಭಿಯೋಜನೆಯವರು ಪ್ರಸ್ತುತ ಆರೋಪಿತರ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಆರೋಪಿತರನ್ನು ನಿರ್ದೋಷಿಗಳು ಎಂದು ನಿರ್ಣಯಿಸಿ ಸದರಿ 1 ರಿಂದ 5 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

16. <u>**ಅಂಶ 6:**</u> ಅಂಶ-1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಅಧಿಕಾರಯುಕ್ತನಾಗಿ ಆರೋಪಿತರ ವಿರುದ್ಧ ಆರೋಪಿಸಿರುವ ಭಾರತೀಯ ದಂಡ ಸಂಹಿತೆ ಕಲಂ.447, 504, 323, 354 ಮತ್ತು 506 ಸಹವಾಚಕ ಕಲಂ.149 ರಡಿ

ದಂಡಿಸಲ್ಪಡುವ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಇನ್ನು 6 ತಿಂಗಳುಗಳ ಕಾಲ ವಿಸ್ತರಿಸಲಾಗಿದೆ.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 1 ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

Sd/-
(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**-ಅನುಬಂಧ-**

**1. ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಅಸಾ-1 - ಲಲಿತಮ್ಮ

**2. ಅಭಿಯೋಜನೆಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ**

| | | |
|---|---|---|
| ನಿಪಿ-1 | - | ದೂರು |
| ನಿಪಿ-1(ಎ) | - | ಅಸಾ-1 ರವರ ಸಹಿ |
| ನಿಪಿ-2 | - | ಸ್ಥಳ ಪಂಚನಾಮೆ |
| ನಿಪಿ-2(ಎ) | - | ಅಸಾ-1 ರವರ ಸಹಿ |
| ನಿಪಿ-3 | - | ಕಚ್ಚಾ ನಕಾಶೆ |
| ನಿಪಿ-3(ಎ) | - | ಅಸಾ-1 ರವರ ಸಹಿ |
| ನಿಪಿ-4 | - | ಫೋಟೋ |
| ನಿಪಿ-5 | - | ಅಸಾ-1 ರವರ ಮರು ಹೇಳಿಕೆ |

**3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಇಲ್ಲಾ

**<u>4. ಆರೋಪಿತರ ಪರ ಗುರುತಿಸಲಾದ ನಿಶಾನೆಗಳ ಪಟ್ಟಿ:</u>**

ಇಲ್ಲಾ

Sd/-

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.